
# ಬೆಳಕಿನ ಸಂಚಲನ

ಸಂ 2, ಸಂ 12 ಏಪ್ರಿಲ್ 2015



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಠಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

**ಅನು: ಶ್ರೀದೇವಿ**

(ಅವರ ಭಾಷಣದ ಆಯ್ದ ಭಾಗಗಳು)

ಪ್ರತಿಯೊಬ್ಬರೂ ಬೆಳಕನ್ನು ಚಾನಲ್ ಮಾಡದಿರಬಹುದು ಆದರೆ ಅರಿವಿಲ್ಲದೆಯೇ ಹೇಗೋ ಕೆಲವೊಂದು ಘಟಿಸುತ್ತಿವೆ. ಕ್ರಾಂತಿ ಒಂದು ಬದಲಾವಣೆ. ಕೆಲವು ಸಲ ಬದಲಾವಣೆಗಳು ಬೇಗ ಮತ್ತು ಸಂಪೂರ್ಣವಾಗಿ ಆಗುತ್ತವೆ. ಕೆಲವು ಸಲ ಬದಲಾವಣೆ ನಿಧಾನ ಮತ್ತು ಭಾಗಶಃವಾಗಿ ಆಗುತ್ತದೆ, ಆದಾಗ್ಯೂ ಸಹ ಇದು ಒಂದು ಬದಲಾವಣೆ. ಇದೂ ಕೂಡ ಒಂದು ಕ್ರಾಂತಿ. ಆ ರೀತಿಯಲ್ಲಿ ಈ ಕ್ರಾಂತಿ ಬಹಳ ಹಿಂದೆಯೇ ಆರಂಭವಾಯಿತು. ಈಗ ನಾವು ಅದಕ್ಕೆ 'ಬೆಳಕಿನಿಂದ ಕ್ರಾಂತಿ' ಎಂದು ಹೆಸರನ್ನು ಕೊಟ್ಟಿದ್ದೇವೆ. ನಾವು ಒಂದು ಕ್ರಾಂತಿಯ ಬಗ್ಗೆ ಯೋಚಿಸಿದಾಗ, ಹಠಾತ್ ಹಾಗೂ ಸಂಪೂರ್ಣ ಬದಲಾವಣೆಯನ್ನು ನಿರೀಕ್ಷಿಸುವುದು ಸ್ವಾಭಾವಿಕ, ಆದರೆ ಆ ರೀತಿ ಯಾವಾಗಲೂ ಆಗುವುದಿಲ್ಲ. ಈ ರೀತಿಯ ನಿಧಾನ ಮತ್ತು ಭಾಗಶಃ ಬದಲಾವಣೆಗಳಿಗೆ, ಇಂತಹ ಪ್ರಕ್ರಿಯೆಗೆ ಬಹುಷಃ ಸರಿಯಾದ ಪದವಿಲ್ಲ. ಹೊಸ ಪದವನ್ನು ಹುಡುಕುವ ತನಕ ನಾವು ಇದನ್ನು ಕ್ರಾಂತಿ ಎಂದು ಕರೆಯಬಹುದು.

ನಾನು ಪ್ರತಿಯೊಬ್ಬರಲ್ಲೂ ಬದಲಾವಣೆಗಳನ್ನು ನಿರೀಕ್ಷಿಸುತ್ತಿದ್ದೇನೆ. ಎಲ್ಲಾ ವ್ಯವಸ್ಥೆಗಳಲ್ಲಿ ಕೂಡ ನಾನು ಬದಲಾವಣೆಗಳನ್ನು ನಿರೀಕ್ಷಿಸುತ್ತೇನೆ. ವ್ಯಕ್ತಿಗಳು ಬದಲಾದಾಗ ವ್ಯವಸ್ಥೆಗಳೂ ಬದಲಾಗುತ್ತವೆ. ಈ ವ್ಯವಸ್ಥೆಗಳು ಭ್ರಷ್ಟಾಚಾರದ ದಾರಿಯಲ್ಲಿ ಬಹಳ ಬಲವಾಗಿ ಮತ್ತು ಆಳವಾಗಿ ಬೇರೂರಿವೆ. ಈ ವ್ಯವಸ್ಥೆಗಳಲ್ಲಿ ಬದಲಾವಣೆಯನ್ನು ನಿರೀಕ್ಷಿಸುವುದು ಹೇಗೆ ಸಾಧ್ಯ? ನಾವು ಬದಲಾಗಲು ಪ್ರಾರಂಭಿಸಿದಾಗ ಇದು ಸಾಧ್ಯವಾಗುತ್ತದೆ. ಆಧ್ಯಾತ್ಮಿಕ ಕ್ರಾಂತಿಗಳು ಯಾವಾಗಲೂ ಅಹಿಂಸಾತ್ಮಕವಾಗಿರುತ್ತವೆ. ಇಲ್ಲಿ ತಿಕ್ಕಾಟವಾಗಲಿ, ದಬ್ಬಾಳಿಕೆಯಾಗಲಿ ಇರುವುದಿಲ್ಲ. ಕೇವಲ ಪ್ರೀತಿ ಮತ್ತು ಭರವಸೆ ಇರುತ್ತವೆ. ನಮ್ಮಂಥ ವ್ಯಕ್ತಿಗಳಿಂದ ಪ್ರಾರಂಭವಾಗುವ ಆ ರೀತಿಯ ಬದಲಾವಣೆಗಳನ್ನು ನಾನು ನಿರೀಕ್ಷಿಸುತ್ತೇನೆ. ಹಾಗೂ ಈ ಬದಲಾವಣೆಗಳಾಗುತ್ತಿರುವುದನ್ನು ಕಾಣುತ್ತಿದ್ದೇನೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ವಿಶ್ವ ಚಾನಲ್ಸ್ ದಿನವಾದ ಜನವರಿ 30ರಂದು, ನಮ್ಮ ಅನೇಕ ಕಾರ್ಯಕರ್ತರಿಗೆ ಅನಿರೀಕ್ಷಿತ ವಲಯಗಳಿಂದ ಸಹಾಯ ಪಡೆದ ಅನುಭವವಾಯಿತು. ಅಂತಹ ಒಂದು ಘಟನೆಯಲ್ಲಿ, ಬೆಂಗಳೂರಿನ ಹತ್ತಿರವಿರುವ ಒಂದು ಪಟ್ಟಣದಲ್ಲಿ ನಮ್ಮ ಕಾರ್ಯಕರ್ತರೊಬ್ಬರಿಗೆ ಲೈಟ್ ಚಾನಲಿಂಗ್ ಸೆಷನ್‌ಗಳನ್ನು ನಡೆಸುವ ಕೆಲಸವನ್ನು ವಹಿಸಲಾಗಿತ್ತು. ಈ ಕಾರ್ಯಕರ್ತರು ಲೈಟ್ ಚಾನಲಿಂಗ್ ಸೂಚನೆಗಳ ಛಾಯಾಪ್ರತಿಗಳನ್ನು ತೆಗೆಯುತ್ತಿರುವಾಗ ಅಪರಿಚಿತ ವ್ಯಕ್ತಿಯೊಬ್ಬರು ಇವರನ್ನು ನೋಡಿದರು ಹಾಗೂ ಅದೇನಿರಬಹುದು ಎನ್ನುವ ಕುತೂಹಲ ಅವರಲ್ಲಿ ಉಂಟಾಯಿತು. ಅವರಿಗೆ ವಿವರಿಸಿ ಹೇಳಿದಾಗ, ಅವರು ಎಷ್ಟು ಪ್ರಭಾವಿತರಾದರೆಂದರೆ, ಸೆಷನ್‌ಗಳನ್ನು ನಡೆಸಲು ನಮ್ಮ ಆ ಕಾರ್ಯಕರ್ತರೊಡನೆ ಹೋಗಲು ನಿರ್ಧರಿಸಿದರು. ಆ ಪಟ್ಟಣಕ್ಕೆ ನಮ್ಮ ಕಾರ್ಯಕರ್ತರು ಹೊಸಬರು. ಆದರೆ ಈ ಅಪರಿಚಿತರು ಒಬ್ಬ ಶಿಕ್ಷಕರಾಗಿದ್ದು ಆ ಪಟ್ಟಣದ ಬಹುತೇಕ ಶಾಲೆಗಳಲ್ಲಿನ ಜನರನ್ನು ತಿಳಿದಿದ್ದರು. ಅವರು ನಮ್ಮ ಕಾರ್ಯಕರ್ತರನ್ನು ಅನೇಕ ಶಾಲೆಗಳಿಗೆ ಕರೆದುಕೊಂಡು ಹೋದರು; ಅಲ್ಲಿನ ಅಧಿಕಾರಿಗಳೊಡನೆ ಮಾತನಾಡಿದರು ಹಾಗೂ ಸಂತೋಷದಿಂದ ಎಲ್ಲಾ ಲೈಟ್ ಚಾನಲಿಂಗ್ ಸೆಷನ್‌ಗಳಲ್ಲಿ ಪಾಲ್ಗೊಂಡರು.

ಅವರ ಸಹಾಯದಿಂದಾಗಿ ನಮ್ಮ ಕಾರ್ಯಕರ್ತರು ಆ ದಿನ ತಮ್ಮ ಯೋಜನೆಯಲ್ಲಿರದಿದ್ದ ಅನೇಕ ಹೊಸ ಶಾಲೆಗಳಿಗೆ ಭೇಟಿ ನೀಡಿ ಹಲವಾರು ಮಕ್ಕಳಿಗೆ ಲೈಟ್ ಚಾನಲ್ ಮಾಡುವುದನ್ನು ಕಲಿಸಿಕೊಡಲು ಸಾಧ್ಯವಾಯಿತು.

ಆ ದಿನ ನಮಗೆ ವಿಶೇಷವಾದ ರೀತಿಯಲ್ಲಿ ಸಹಾಯ ಮಾಡಿದ ಅಂತಹ ಎಲ್ಲಾ ವ್ಯಕ್ತಿಗಳಿಗೂ ನಾವು ಕೃತಜ್ಞರು. 'ವಿಶ್ವ ಚಾನಲ್ಸ್ ದಿನ'ದಂದು ನಾವು ವಿಶೇಷವಾಗಿ ಪಡೆದ ವಿಶ್ವದ ಕೃಪೆಗೆ ಅವರು ಚಾನಲ್ ಆದರು.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಬೆಳಕನ್ನು ಅನುಭವಿಸುವುದು, ಯಾವುದೇ ವ್ಯಕ್ತಿಯ ಜೀವನದಲ್ಲಿನ ಬಹಳ ಸುಂದರವಾದ ಅನುಭವ. ಬೆಳಕನ್ನು ಅನುಭವಿಸುವುದೆಂದರೆ, ಪ್ರೀತಿ, ಶಾಂತಿ, ಸಮೃದ್ಧಿ ಮತ್ತು ಸಕಾರಾತ್ಮಕವಾಗಿರುವ ಎಲ್ಲವನ್ನೂ ಅನುಭವಿಸುವುದು. ಈ ಒಂದು ಅನುಭವ ಜೀವನದ ಬಗೆಗೆ ನಮಗೆ ಇರುವ ಸಮಗ್ರವಾದ ತಿಳುವಳಿಕೆಯನ್ನು ಬದಲಾಯಿಸಬಹುದು. ನಾವು ಜೀವನವನ್ನು ಉನ್ನತ ಕೋನದಿಂದ ನೋಡುವುದನ್ನು ಪ್ರಾರಂಭಿಸಬಹುದು. ನಿಧಾನವಾಗಿ ನಮ್ಮ ಎಲ್ಲಾ ಸಮಸ್ಯೆಗಳು ಅಲ್ಪ ವಿಷಯಗಳಾಗಿ ಕಾಣಬಹುದು ಹಾಗೂ ನಮ್ಮ ಕಾಳಜಿ ವಿಶ್ವಾತ್ಮಕ ಸಮಸ್ಯೆಗಳ ಬಗೆಗೆ ಇರುತ್ತದೆ. ಈ ಪ್ರಪಂಚ ಮತ್ತು ಜನರ ಮೇಲೆ ಇರುವ ನಮ್ಮ ಆಕ್ಷೇಪಣೆ ಮತ್ತು ಅಸಮಾಧಾನ ಈ ಒಂದು ಮಹತ್ವದ ಅನುಭವದಿಂದ ಕೊನೆಗೊಳ್ಳಬಹುದು. ನಂತರ ನಾವು ಪ್ರತಿಯೊಂದನ್ನೂ ದೇವರ ಕೊಡುಗೆಗಳು ಎಂದು ಸ್ವೀಕರಿಸಲು ಪ್ರಾರಂಭಿಸುತ್ತೇವೆ.

ತಮ್ಮ ಪರಿಶುದ್ಧತೆ ಹಾಗೂ ಒಳ್ಳೆಯ ನೈಜಸ್ವಭಾವದಿಂದಾಗಿ ಅನೇಕ ಮಕ್ಕಳು ತಮ್ಮ ಮೊದಲ ಲೈಟ್ ಚಾನಲಿಂಗ್ ಸೆಷನ್‌ನಲ್ಲಿಯೇ ಬೆಳಕನ್ನು ಅನುಭವಿಸುವುದನ್ನು ನಾವು ನೋಡಿದ್ದೇವೆ. ದೇವರ ಸಾಮ್ರಾಜ್ಯವನ್ನು ಪ್ರವೇಶಿಸಲು ಮಗುವಿನಂತಹ ಮುಗ್ಧತೆಯನ್ನು ನಾವು ಹೊಂದಿರಬೇಕು ಎಂದು ಅಮರರವರು ಹೇಳುತ್ತಿದ್ದರು.

ಇಂತಹ ಆನಂದದಾಯಕ ಅನುಭವವನ್ನು ಪಡೆಯಲು ನಾವು ಬೆಳಕನ್ನು ಚಾನಲ್ ಮಾಡೋಣ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 5 PM)
ಇ–ಮೇಲ್ : info@lightchannels.com ವೆಬ್‌ಸೈಟ್ : www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ,
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಗುರುವಾರ (ಸಂಜೆ 6:30 - 7:00)
ಮಂಚ್‌ಕಿನ್ಸ್, ನಂ.
890, 38ನೇ ಅಡ್ಡರಸ್ತೆ,
20ನೇ ಮುಖ್ಯರಸ್ತೆ,
4ನೇ 'T' ಬ್ಲಾಕ್, ಜಯನಗರ
☎ 9902025444 ಕಾರ್ತಿಕ್ ಎನ್.

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ,
ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೆಕರ್

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ,
8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



ಬೆಂಗಳೂರಿನ ಶಾಲೆಯೊಂದರ ಸಿಬ್ಬಂದಿ ವರ್ಗದವರು ಬೆಳಕನ್ನು ಚಾನಲ್ ಮಾಡುತ್ತಿರುವುದು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಬೆಳಕು ಒಂದು ದಿವ್ಯ ಚೇತನ. ಅದಕ್ಕೆ ತನ್ನದೇ ಆದ ಬುದ್ಧಿ ಮತ್ತು ವಿವೇಕವಿದೆ.
- ದಿವ್ಯ ಬೆಳಕು, ಸೃಷ್ಟಿಕಾರಕ ಶಕ್ತಿ ಹಾಗೂ ಈ ಎಲ್ಲಾ ಸೃಷ್ಟಿಯ ಮೂಲ.
- ಪ್ರೀತಿ, ಶಾಂತಿ ಹಾಗೂ ಕರುಣೆ ದಿವ್ಯ ಬೆಳಕಿನ ಭಾಗಗಳು.
- ಬೆಳಕು ಶಾಂತಿ, ಪ್ರೀತಿ ಮತ್ತು ಪರಿಪೂರ್ಣತೆಯನ್ನು ಮೊದಲು ವ್ಯಕ್ತಿಗೆ ನಂತರ ಪ್ರಪಂಚಕ್ಕೆ ತರುತ್ತದೆ.
- ಬೆಳಕು ವಿವೇಕ ಮತ್ತು ಧೈರ್ಯವನ್ನು ನೀಡುತ್ತದೆ. ಜೊತೆಗೆ ಬೆಳಕು ನಮ್ಮನ್ನು ಜಾಗೃತಗೊಳಿಸುತ್ತದೆ.
- ಬೆಳಕು ನಮ್ಮಲ್ಲಿ ಅದ್ಭುತವಾದ ಬದಲಾವಣೆಗಳನ್ನು ತರುತ್ತದೆ, ಎಲ್ಲಾ ರೀತಿಯಲ್ಲಿ ಸಹಾಯ ಮಾಡುತ್ತದೆ ಹಾಗೂ ನಮ್ಮನ್ನು ವಿಶ್ವಾತ್ಮಕ ವ್ಯಕ್ತಿಗಳಾಗಿ ಮಾರ್ಪಡಿಸುತ್ತದೆ.
- ಬೆಳಕು ಶಾಂತಿ, ಆರೋಗ್ಯ ಹಾಗೂ ಯಶಸ್ಸನ್ನು ಸಮೃದ್ಧವಾಗಿ ತರುತ್ತದೆ.

– ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4920 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 27.07 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಶಾಂತಿ ಸ್ಥಾಪಕ

**ಉಷಾ ಸತೀಶ್ಚಂದ್ರ; ಅನು: ಶ್ರೀದೇವಿ**

ಸಂಘರ್ಷ, ಗೊಂದಲ ಹಾಗೂ ಭಯ ಇಂದಿನ ಪರಿಸ್ಥಿತಿಯಾಗಿರುವಂತೆ ತೋರುತ್ತದೆ. ಮಕ್ಕಳು ಮತ್ತು ದೊಡ್ಡವರು ಒಂದೇ ರೀತಿಯಲ್ಲಿ ನಿರಂತರವಾಗಿ ಜಯ–ಅಪಜಯಗಳ ನಡುವೆ ಸೆಣಸಾಡುತ್ತಿದ್ದಾರೆ. ಸುಭದ್ರ ಹಾಗೂ ಸುರಕ್ಷಿತ ಭವಿಷ್ಯಕ್ಕಾಗಿ, 'ಹೀಗಾದರೆ, ಹಾಗಾದರೆ' ಎನ್ನುವ ಅನಿಶ್ಚಿತತೆಯ ಭಯ ವಿವೇಚನಾಶೂನ್ಯವಾಗಿ ಮತ್ತು ಅಸಮಂಜಸವಾಗಿ ತರ್ಕಕ್ಕೆ ನಿಲುಕದ ಪೈಪೋಟಿ ನಡೆಸಲು ಮಾನವಕುಲವನ್ನು ದೂಡಿದೆ.

ಯಾರ ಜೊತೆ ನಾವು ಪೈಪೋಟಿ ನಡೆಸುತ್ತಿದ್ದೇವೆ? ಇದು ನಮ್ಮ ಸಹಮಾನವರೊಂದಿಗೆಯೆ ಅಥವಾ ನಮ್ಮದೇ ಆದ ನಕಾರಾತ್ಮಕತೆಗಳೊಂದಿಗೆಯೆ? ನಾವು ಮನುಷ್ಯರ ಭಾವನೆಗಳನ್ನು ನಿಭಾಯಿಸಬೇಕೆ ಅಥವಾ ಮನುಷ್ಯರನ್ನು ನಿಭಾಯಿಸಬೇಕೆ? ಆನಂದವನ್ನು ಸಮರಸವಾಗಿ ನಾವು ನಮ್ಮೊಳಗೆ ಬಯಸುತ್ತೇವೆಯೆ? ಅಥವಾ ಪ್ರಶಂಸೆಗಳನ್ನು ಗಳಿಸಲು ಮತ್ತು ಪ್ರಶಂಸಾ ಪತ್ರಗಳಿಗಾಗಿ ಹಾಗೂ ಸ್ಥಾನಮಾನಗಳಿಗಾಗಿ, ನಾವು ಮತ್ತೆ ಮತ್ತೆ ಸೆಣಸಾಡುತ್ತೇವೆಯೆ? ಪುನಃ ನಾವು ಯೋಚಿಸಬೇಕಾಗಿದೆ.

ಪೈಪೋಟಿ ನಡೆಸಲು ನಮ್ಮ ಮನೋಭಾವದಲ್ಲಿ ಒಂದು ಪರಿವರ್ತನೆ ಯಾಗಬೇಕಾಗಿದೆ. ಜೀವನದ ನಿರ್ವಹಣೆಗೆ ಬಹುಮಟ್ಟಿಗೆ ಚಾಲ್ತಿಯಲ್ಲಿರುವ 'ಭಯದಿಂದ ಯಶಸ್ಸು' ಎನ್ನುವ ಘೋಷಣೆಯನ್ನು 'ಶಾಂತಿಯಿಂದ ಪರಿಪೂರ್ಣತೆ' ಎಂದು ಪುನಃ ಬರೆಯಬೇಕಾಗಿದೆ. ಮುಗ್ಧತೆ, ಪರಿಶುದ್ಧತೆ, ಹಾಗೂ ಸರಳತೆಯ ಸ್ಥಿತಿಯನ್ನು ತಲುಪಲು ಸ್ಪಷ್ಟವಾದ ಆಯ್ಕೆಯನ್ನು ನಾವು ಮಾಡಬಹುದು. ಪ್ರತಿಯೊಬ್ಬರ ಒಳಗೂ ಇದು ಹೊತ್ತಿಕೊಳ್ಳಲು ಕಾಯುತ್ತದೆ. ನಮ್ಮಲ್ಲಿರುವ ದಿವ್ಯ ಸತ್ವವನ್ನು ಅನಾವೃತಗೊಳಿಸಲು ಉದ್ದೀಪನಗೊಳಿಸಬೇಕಾಗಿದೆ.

ಶಾಂತಿ ಮತ್ತು ಪ್ರೀತಿಯನ್ನು ಒದಗಿಸುವ, ಪೋಷಿಸುವ, ಹೊಂದಿರುವ ಹಾಗೂ 'ಶಾಂತಿ ಸ್ಥಾಪಕ'ವಾದ ಬೆಳಕನ್ನು, ಯಾವುದೇ ಹಿಂಜರಿಕೆ ಇಲ್ಲದೆ ಸದಾಕಾಲ, ಪ್ರತಿ ಸಲವೂ ನಮ್ಮೊಳಗೆ ತೆಗೆದುಕೊಳ್ಳಬಹುದು. ಆನಂದ ಮತ್ತು ಪ್ರೀತಿಯಿಂದ ತುಂಬಬಹುದಾದ ನಮ್ಮ ಹೃದಯಗಳಲ್ಲಿ ಒಂದು ಸಣ್ಣ ತೆರವು ಇದಕ್ಕೆ ಸಾಕು.

ಲೈಟ್ ಚಾನಲಿಂಗ್, ಉನ್ನತಸ್ಥಿತಿಗೇರಿಸಬಹುದಾದಂತಹ ಬಹು ಸರಳ ಹಾಗೂ ಅಪೂರ್ವವಾದ ಒಂದು ತಂತ್ರ. ಆಧುನಿಕ ಜೀವನದ ಯಥಾರ್ಥವಲ್ಲದ ಒತ್ತಡಗಳಿಂದ ನಾವು ಮುಕ್ತರಾಗಿ, ಕಲಿಯುವ, ಅನುಭವಿಸುವ ಹಾಗೂ ನಮ್ಮ ಜೀವನದ ಗುಣಮಟ್ಟವನ್ನು ವೃದ್ಧಿಗೊಳಿಸಿಕೊಳ್ಳುವುದರಲ್ಲಿ ಇರುವ ನಿಜವಾದ ಆನಂದವನ್ನು ಅನುಭವಿಸಬಹುದು. ಇದರೊಂದಿಗೆ, ಗೊಂದಲ ಹಾಗೂ ಸಂಘರ್ಷಗಳಿಗೆ ಯಾವುದೇ ಅವಕಾಶ ಕೊಡದೆ ನಮ್ಮ ಉದ್ದೇಶ ಹಾಗೂ ಗುರಿಗಳನ್ನು ಸ್ಪಷ್ಟವಾಗಿ ಮರುನಿರ್ಧರಿಸಬಹುದು.

ನಮ್ಮ ಶರೀರದ ಪ್ರತಿ ಕಣವೂ ಶಾಂತಿ ಮತ್ತು ಪ್ರೀತಿಯನ್ನು ತುಂಬಿಕೊಳ್ಳಬಹುದಾಗಿದೆ. ಮೇಲಿನಿಂದ ಬೆಳಕನ್ನು ಒಳಗೆ ತೆಗೆದುಕೊಳ್ಳುವುದರ ಮೂಲಕ ಅವನ್ನು ನಿಯತವಾಗಿ ಪುನಃ ಪುನಃ ತುಂಬಬಹುದು. ಬೆಳಕನ್ನು ಪ್ರತಿ ದಿನ ಚಾನಲ್ ಮಾಡಿದಾಗ ಈ ಗುಣಗಳು ಹರಡುತ್ತವೆ. 'ಶಾಂತಿ ಸ್ಥಾಪಕ'ರಾಗಲು ನಾವೆಲ್ಲಾ ಒಟ್ಟಿಗೆ ಬೆಳೆಯೋಣ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್,
ಆಂಜನೇಯ ದೇವಸ್ಥಾನದ ಎದುರು,
ಅಶ್ವತ್ಥ ನಗರ ಮುಖ್ಯ ರಸ್ತೆ, ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

### ಸೋಲಾಪೂರ್

ಪ್ರತಿದಿನ (ಸಂಜೆ 7:00 - 7:30)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066, ಶ್ರೀ ವಿವೇಕಾನಂದ ಸ್ವಾಮಿ
☎ 09970800279, ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

ಭಾನುವಾರ (ಬೆಳಿಗ್ಗೆ 10:00 -10:30)
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ.ಕೆ. ನಗರ
☎ 9444880409, ಶ್ರೀಮತಿ ರಾಜಲಕ್ಷ್ಮಿ ಆರ್.

### ಪುಣೆ

ಶನಿವಾರ (ಸಂಜೆ 6:30 - 7:00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169, ಶ್ರೀ ಆಶುತೋಶ್ ನವನ್‌ಗುಲ್


ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ,
ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್,
ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್

### ವಿಶಾಖಪಟ್ಟಣ

ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207,
ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್,
ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

### ಮೀರಜ್

ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಶ್ ನಗರ ಪೋಸ್ಟ್
☎ 9822421463, ಶ್ರೀ ಮಹಾಜನ್



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಜನವರಿ 27ರಂದು ನಮ್ಮ ಮನೆಯಿಂದ 40 ಕಿ.ಮೀ. ದೂರದ ಆವಡಿಯಲ್ಲಿರುವ ಎರಡು ಕೇಂದ್ರೀಯ ವಿದ್ಯಾಲಯ ಶಾಲೆಗಳಲ್ಲಿ ಲೈಟ್ ಚಾನಲಿಂಗ್‌ಗಾಗಿ ನಾವು ಹೋಗಬೇಕಾಗಿತ್ತು. ಇದು ಸೇನಾ ಪ್ರದೇಶವಾದ ಕಾರಣ ಇಲ್ಲಿ ಸಂಚಾರ ಕಷ್ಟಕರ. ನಾನು ಕಾಲ್ ಟ್ಯಾಕ್ಸಿಯನ್ನು ಗೊತ್ತು ಮಾಡಿಕೊಂಡೆ ಆದರೆ ಸರಿಯಾದ ಸಮಯಕ್ಕೆ ತಲುಪುವುದರ ಬಗ್ಗೆ ಆತಂಕವಿತ್ತು. ಅನಿರೀಕ್ಷಿತವಾಗಿ, ಅದೇ ಪ್ರದೇಶದ ಒಬ್ಬ ಕಾಲ್ ಟ್ಯಾಕ್ಸಿ ಡ್ರೈವರ್ ಆ ದಿನ ಬಂದರು. ಅವರಿಗೆ ಆ ಶಾಲೆಗಳ ಜಾಗ ಗೊತ್ತಿದ್ದರಿಂದ ಸಮಯಕ್ಕೆ ಮುಂಚಿತವಾಗಿಯೇ ಅಲ್ಲಿಗೆ ನಮ್ಮನ್ನು ಕರೆದುಕೊಂಡು ಹೋಗಲು ಸಾಧ್ಯವಾಯಿತು. ಆದರೆ ಅವರು ಈ ಪ್ರದೇಶ ತಮ್ಮ ಮನೆಯ ಹತ್ತಿರವಿರುವ ಅದೇ ಹೆಸರಿನ ಬೇರೆ ಪ್ರದೇಶವೆಂದು ತಪ್ಪಾಗಿ ಭಾವಿಸಿ ಈ ಟ್ರಿಪ್‌ಅನ್ನು ಆಯ್ಕೆ ಮಾಡಿಕೊಂಡಿದ್ದರು. ಇದರಿಂದ 27 ಕಿ.ಮೀ. ದೂರ ಖಾಲಿ ಟ್ಯಾಕ್ಸಿ ಓಡಿಸಬೇಕಾಗಿ ಬಂದದ್ದರಿಂದ ಅವರು ಅಸಂತೋಷವಾಗಿದ್ದರು. ಶಾಲೆಗಳಿಗೆ ಹೋಗಿ ನಾವು ಏನು ಮಾಡುತ್ತೇವೆ ಎನ್ನುವುದನ್ನು ನಾನು ವಿವರಿಸಿದಾಗ, ಅವರು ಸಂಪೂರ್ಣವಾಗಿ ಮೆಚ್ಚುಗೆ ವ್ಯಕ್ತ ಪಡಿಸಿದರು ಹಾಗೂ ಇಳಿಯುವಾಗ, ನಾನು ಯಾವಾಗ ಅವರನ್ನು ಕರೆದರೂ, ಎಷ್ಟು ದೂರವಾದರೂ ಸರಿ, ದುಡ್ಡಿನ ಬಗ್ಗೆ ಚಿಂತಿಸದೆ ಬರುತ್ತೇನೆ ಎಂದು ಹೇಳಿದರು. ನಾನು ಇನ್ನೂ ಒಂದು ಶಾಲೆಗೆ ಹೋಗಬೇಕಾಗಿದ್ದ ಕಾರಣ, ಹೆಚ್ಚುವರಿ ಪ್ರಯಾಣಕ್ಕಾಗಿ ಟ್ಯಾಕ್ಸಿಯ ಬಿಲ್ಲಿನ ಜೊತೆಗೆ ಹೆಚ್ಚಿನ ಹಣವನ್ನು ಪಾವತಿಸಬೇಕಾಯಿತು. ಇದು ಒಂದು ಪ್ಯಾಕೇಜ್ ಟ್ಯಾಕ್ಸಿ ಪ್ರಯಾಣವಾಗಿದ್ದರಿಂದ, ನಾನು ಕೊಟ್ಟ ಹೆಚ್ಚಿನ ದುಡ್ಡು, 27 ಕಿ.ಮೀ. ಖಾಲಿಯಾಗಿ ಪ್ರಯಾಣಿಸಿದಾಗ ಆದ ನಷ್ಟಕ್ಕೆ ಸಮವಾಗಿತ್ತು! ಇಂಥ ಚಿಕ್ಕ ಚಿಕ್ಕ ವಿಷಯಗಳಲ್ಲೂ ಕಾಳಜಿ ವಹಿಸುವ ಋಷಿಗಳು ಎಷ್ಟೊಂದು ಪರಹಿತ ಚಿಂತನೆಯುಳ್ಳವರು ಎಂದೆನಿಸಿತು.

– ರಾಜಲಕ್ಷ್ಮಿ ಆರ್, ಕಾರ್ಯಕರ್ತೆ

ಜನವರಿ 30ರಂದು ಮತ್ತು ಫೆಬ್ರವರಿ 2ರಂದು ನಾನು ನಡೆಸಿದ ಪ್ರತಿಯೊಂದು ಲೈಟ್ ಚಾನಲಿಂಗ್ ಸೆಷನ್‌ನಲ್ಲೂ ನನ್ನ ಕಣ್ಣುಗಳ ಮಧ್ಯೆ ಗಾಢವಾದ ಚೈತನ್ಯಗಳಿರುವುದು ಅನುಭವವಾಯಿತು. ನಾನು ಲೈಟ್ ಚಾನಲಿಂಗ್‌ಗಾಗಿ ಹೋದ ಎಲ್ಲಾ ಶಾಲೆಗಳಲ್ಲಿ ಹಳದಿ ಬೆಳಕಿನ ಕಣಗಳನ್ನು ನೋಡಿದೆ. ವಿಶ್ವ ಸಂಚಲನದ ದಿನದಂದು ಲೈಟ್ ಚಾನಲಿಂಗ್ ಸೆಷನ್‌ಗಳನ್ನು ನಡೆಸುವುದು ಸ್ವಯಂಚಾಲಿತವಾಗಿದೆ ಹಾಗೂ ಅದನ್ನು ಸ್ವತಃ ಮಾಸ್ಟರ್ V-ಯವರು ವಹಿಸಿಕೊಂಡಿದ್ದು, ಎಲ್ಲಾ ಸೆಷನ್‌ಗಳನ್ನು ಅವರೇ ನಿರ್ವಹಿಸುತ್ತಿದ್ದಾರೆಂದು ನನಗೆ ಅನ್ನಿಸಿತು. ನಾನು ಕೇವಲ ಒಂದು ಮಾಧ್ಯಮವಾಗಿದ್ದೆ. ಹಿಂತಿರುಗಿ ನೋಡಿದಾಗ, ಹೇಗೆ ಪ್ರತಿಯೊಂದೂ ಅಂತಿಮ ರೂಪ ಪಡೆದುಕೊಂಡಿತು ಮತ್ತು ಹೇಗೆ ಶಾಲೆಗಳು ಸೆಷನ್‌ಗಳನ್ನು ನಡೆಸಲು ಅನುಮತಿ ನೀಡಿದವು ಎನ್ನುವುದು ಅದ್ಭುತವೆನಿಸಿತು. ಪ್ರತಿ ಹೆಜ್ಜೆಯಲ್ಲೂ ಬೆಳಕಿನ ಸಹಾಯವಿರುವುದು ಅರಿವಾದಾಗ ಅಚ್ಚರಿಯಾಯಿತು.

– ಜಸ್‌ಪ್ರೀತ್ ಕೌರ್, ಕಾರ್ಯಕರ್ತೆ

ಚಿಂತಾಮಣಿ ಶಾಲೆಯಲ್ಲಿ ಅಸೆಂಬ್ಲಿಯನ್ನು ಒಂದು ಮೈದಾನದಲ್ಲಿ ನಡೆಸಲಾಗುತ್ತದೆ. ವಾಹನ ಸಂಚಾರ ದಟ್ಟವಾಗಿರುವ ಒಂದು ರಸ್ತೆ ಅದರ ಪಕ್ಕದಲ್ಲಿದೆ. ವಿದ್ಯುಚ್ಛಕ್ತಿ ಇಲ್ಲದ ಕಾರಣ ಧ್ವನಿವರ್ಧಕವಿರಲಿಲ್ಲ. ಲೈಟ್ ಚಾನಲಿಂಗ್ ಸೆಷನ್ ಮುಂದುವರಿದಂತೆ, ಅದ್ಭುತವಾದ ಚೈತನ್ಯಗಳಿಂದ ಉಂಟಾದ ನಿಶ್ಚಲತೆಯು, ಸೂಚನೆಗಳು ಎಲ್ಲರಿಗೂ ಕೇಳಿಸುವಂತೆ ಮಾಡಿತು ಹಾಗೂ ನಿರಂತರವಾಗಿ ಚಲಿಸುತ್ತಿದ್ದ ವಾಹನಗಳ ಶಬ್ದವನ್ನು ಮರೆತಂತಾಗಿತ್ತು.

ಆಳಂದಿಯ ಮಹತೋಬಾ ವಿದ್ಯಾಲಯದಲ್ಲಿ ಲೈಟ್ ಚಾನಲಿಂಗ್ ಸೆಷನ್‌ಗಾಗಿ ವಿದ್ಯಾರ್ಥಿಗಳು ಆಟದ ಮೈದಾನದಲ್ಲಿ ಮಧ್ಯಾಹ್ನದ ಬಿಸಿಲಿನಲ್ಲಿ ಆಸೀನರಾಗಿದ್ದರು. ಬಿಸಿಲಿನ ಬೇಗೆ ಹೆಚ್ಚಾಗಿತ್ತು. ಆ ಸೆಷನ್‌ನಲ್ಲಿ ತಂತ್ರವನ್ನು ಅಭ್ಯಾಸ ಮಾಡಲು ವಿದ್ಯಾರ್ಥಿಗಳು ತಮ್ಮ ಕಣ್ಣುಗಳನ್ನು ಮುಚ್ಚಿದಾಗ ತಂಗಾಳಿ ಬೀಸಿ ಸುತ್ತಮುತ್ತಲಿನ ಪ್ರದೇಶವನ್ನು ತಂಪು ಮಾಡಿತು! ನಾವು ಶಾಲೆಯಿಂದ ಹೊರಗೆ ಬರುವವರೆಗೂ ತಂಗಾಳಿ ಬೀಸುತ್ತಿತ್ತು.

ಎಲ್ಲಾ ಸೆಷನ್‌ಗಳಲ್ಲಿ ಕಾರ್ಯಕರ್ತರೆಲ್ಲರಿಗೂ ನಿಶ್ಚಲತೆಯ ಅನುಭವವಾಯಿತು. ಮಾಸ್ಟರುಗಳ ಕೃಪೆ ಹಾಗೂ ಅವರ ಇರುವಿಕೆ ಸ್ಪಷ್ಟವಾಗಿತ್ತು. ಎಲ್ಲಾ ಸೆಷನ್‌ಗಳು ನಡೆಯುವ ಮೊದಲು ಹಾಗೂ ನಂತರ ಸುತ್ತಮುತ್ತಲಿನ ಒಟ್ಟಾರೆ ವಾತಾವರಣ ವಿಭಿನ್ನವಾಗಿತ್ತು. ನಾವು ಮನೆಗೆ ಹಿಂತಿರುಗಿ ಬರುತ್ತಿರುವಾಗ, ಮುಂಬರುವ ವರ್ಷಗಳ ಸೆಷನ್‌ಗಳಿಗೆ, ಸಾಧನೆಗೆ, ಮತ್ತು ಜೀವನದ ಪ್ರತಿಯೊಂದರಲ್ಲೂ ಭರವಸೆ ಮತ್ತು ನಿರೀಕ್ಷೆಯಿಂದ ಕೂಡಿರುವಂತೆ ಅಸ್ತಮಿಸುತ್ತಿರುವ ಸೂರ್ಯ ಕಾಣುತ್ತಿದ್ದ.

– ಗೀತಾ ಜೋಷಿ, ಕಾರ್ಯಕರ್ತೆ

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು : ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ